

ದಿಬ್ಬ ಹಳ್ಳ ತಿಟ್ಟುಗಳು ಇಂದಿನ ಎಲ್ಲ ಆಧುನಿಕ ಸವಲತ್ತುಗಳೊಂದಿಗೆ ರಾರಾಜಿಸುತ್ತಿವೆ. 1847ರಲ್ಲಿ ಅಂದಿನ ಪ್ರಧಾನಿ ಲಾರ್ಡ್ ಜಾನ್ ರಸಲ್ ತನ್ನ ನಿವಾಸವನ್ನು ಇಲ್ಲಿನ 'ಪೆಂಬ್ರೊಕ್ ಲಾಡ್ಜ್'ಗೆ ಬದಲಾಯಿಸಿಕೊಂಡು ತನ್ನ ನಿವಾಸ ಸ್ಥಾನವಾಗಿಸಿಕೊಂಡ. ಇಲ್ಲಿಂದಲೇ ಆಡಳಿತ ನಡೆಸುತ್ತ ಹಲವರನ್ನು ಇಲ್ಲಿಗೆ ಆಹ್ವಾನಿಸಿ ರಂಜಿಸುತ್ತಿದ್ದ. ಇವತ್ತು ಅದು ಇಂಗ್ಲೆಂಡಿನ ಒಂದು ದುಬಾರಿ ರೆಸ್ಟೊರೆಂಟ್ ಆಗಿದೆ. 13 ಎಕರೆ ಜಾಗದಲ್ಲಿರುವ ಈ ಕಟ್ಟಡದ ಆಸುಪಾಸಿನಲ್ಲಿ 200 ಕಾರುಗಳನ್ನು ನಿಲ್ಲಿಸಲು ಜಾಗ ಮಾಡಿದ್ದಾರೆ. ಇಲ್ಲಿ ಹಲವು ಮದುವೆಗಳೂ ನಡೆಯುತ್ತವೆ. ಈ ಚಾರಿತ್ರಿಕ ಹಿನ್ನೆಲೆಯ ಕಾರಣ ಇದೊಂದು ದುಬಾರಿ ತಾಣ.

ರಿಚ್ಮಂಡ್ ಪಾರ್ಕ್‌ನಲ್ಲಿ 1830ರಲ್ಲಿ ನೆಟ್ಟು ಬೆಳೆಸಲಾದ ಇಸಬೆಲ್ಲ ಪ್ಲಾಂಟೇಷನ್ ಇದೆ. ಅದು ಇಡೀ ಪಾರ್ಕಿನ ಸೌಂದರ್ಯ ಕಣ್ಮಣಿ. 43 ಎಕರೆಗಳಷ್ಟು ದೊಡ್ಡದಿರುವ ಈ ಹೂಗಳ ಉದ್ಯಾನವನ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ತನ್ನ ಬಹುದೇಶಿಯ ಸಸ್ಯ ಸೌಂದರ್ಯದಿಂದ ಕಂಗೊಳಿಸುತ್ತದೆ. 1953ರಿಂದಲೂ ಈ ಜಾಗಕ್ಕೆ ಸಾರ್ವಜನಿಕರು ಹೂಗಳ ಸೌಂದರ್ಯವನ್ನು ಆಸ್ವಾದಿಸಲು ಬರುತ್ತಿದ್ದಾರೆ.

ಇಲ್ಲಿ ಕಿಂಗ್ ಹೆನ್ರಿ ದಿಬ್ಬವೂ ಇದೆ. ಈ ಹೆನ್ರಿ ಇಂಗ್ಲೆಂಡಿನ ಕುಖ್ಯಾತ ದೊರೆ. ಈತ ಒಬ್ಬರಾದ ಮೇಲೆ ಇನ್ನೊಬ್ಬರಂತೆ 6 ಜನರನ್ನು ಮದುವೆಯಾದವ. 1536 ಮೇ 19ರಂದು ಆತ ಈ ದಿಬ್ಬದ ಮೇಲೆ ನಿಂತು, 'ಲಂಡನ್ ಟವರ್' ಎನ್ನುವ ಜೈಲಿನಿಂದ ಹಾರಿಸುವ ಸಿಡಿಮದ್ದಿನ ಸಿಗ್ನಲ್‌ಗೆ ಕಾದಿದ್ದನಂತೆ. ಈ ಪಟಾಕಿಯ ಅರ್ಥ, ಆತನ ಹೆಂಡತಿ ಆನ್‌ಳ ತಲೆಕಡಿದು ಮುಗಿಸಿದ್ದನ್ನು ಖಾತರಿಪಡಿಸುವ ಸಂಕೇತವಾಗಿದ್ದುದೇ ದುರಂತ. ಸಾವಿರ ದಿನಗಳ ದುರಂತದ ರಾಣಿ ಎಂತಲೇ ಜನರ ಕನಿಕರಕ್ಕೊಳಗಾಗಿರುವ ಆನ್‌ಳನ್ನು ಆತ ಪ್ರೀತಿಸಿಯೇ ಮದುವೆಯಾಗಿದ್ದ. ಮೂರು ವರ್ಷಗಳಲ್ಲಿ ಈತನ ಗಮನ ಮತ್ತೊಬ್ಬ ಹೆಂಗಸಿನ ಮೇಲೆ ಬಿತ್ತು. ಆದರೆ ಡೈವೋರ್ಸಿಗೆ ಚರ್ಚಿನ ಒಪ್ಪಿಗೆಯಿಲ್ಲದ ಕಾರಣ ದೊರೆ ತನ್ನ ಸ್ವಂತ ಹೆಂಡತಿಯ ಮೇಲೆಯೇ ಇಲ್ಲಸಲ್ಲದ ದೇಶದ್ರೋಹದ ಆರೋಪ ಹೊರಿಸಿದ. ಅವಳ ತಲೆಕಡಿಸಿ ತನ್ನ ಪ್ರೇಯಸಿ ಲೇಡಿ ಜೇನ್ ಸಿಮೋರ್‌ಳನ್ನು ಮದುವೆಯಾದ. ಈ ದೊರೆಯ ನೈತಿಕ ಬಾಹಿರ್ಯದ ಬಗ್ಗೆ ಹಲವು ಕಥೆಗಳಿವೆ. ಆ ದಿನ ಆತ ಊರಿನಲ್ಲಿಯೇ ಇರಲಿಲ್ಲ ಎಂದು ಹೇಳುವವರೂ ಇದ್ದಾರೆ.

ರಿಚ್ಮಂಡ್ ಪಾರ್ಕ್‌ನ ಮೊದಲ ಹೆಸರು 'ಮೇನರ್ ಆಫ್ ಶೀನ್' ಎಂದಾಗಿತ್ತು. 1272–1307ರಲ್ಲಿ ಲಂಡನ್‌ನ ದೊರೆಯಾದ ಎಡ್ವರ್ಡ್‌ನಿಗೆ ಸೇರಿದ ಜಾಗವಾಗಿತ್ತು.

3 ಗೋಲ್ಡನ್ ಗ್ಲೋಬ್ ಮತ್ತು ಒಂದು ಆಸ್ಕರ್ ಪ್ರಶಸ್ತಿ ಗಳಿಸಿದ 'ಆನ್ ಆಫ್ ಥೌಸಂಡ್ ಡೇಸ್' ಎನ್ನುವ 8ನೇ ಹೆನ್ರಿಯ ಬಗೆಗಿನ ಸಿನಿಮಾದಲ್ಲಿ ಈ ಪಾರ್ಕನ್ನು ತೋರಿಸಲಾಗಿದೆ. ಅದರ ನಂತರ ಬಂದ 'ಕ್ಯಾರಿ ಆನ್ ಹೆನ್ರಿ' ಎನ್ನುವ ಚಿತ್ರದ ಚಿತ್ರೀಕರಣವೂ ಇಲ್ಲಿ ನಡೆದಿದೆ. ಇದನ್ನು ಹೊರತಾಗಿ ಬಿಬಿಸಿ, ಬ್ಲೂ ಪೀಟರ್, ಡೇವಿಡ್ ಅಟೆನ್ ಬರೋನ ಸ್ಪ್ರಿಂಗ್ ವಾಚ್ ಎನ್ನುವ ಸರಣಿ ಕಾರ್ಯಕ್ರಮಗಳಲ್ಲಿ ಈ ಪಾರ್ಕನ್ನು ಪದೇ ಪದೇ ಬಳಸಿದ್ದಾರೆ. ಬಿಬಿಸಿಯ ಹವಾಮಾನ ವಾರ್ತೆಯ ಹಿನ್ನೆಲೆಯಾಗಿ, ಹಲವು ಆಫೀಸು ಮತ್ತು ಮಾಧ್ಯಮಗಳ ಹಿನ್ನೆಲೆ ದೃಶ್ಯವಾಗಿಯೂ ಈ ಪಾರ್ಕ್ ಜನರ ಕಣ್ಣಿಗೆ ಹಸಿರಿನ ಹಬ್ಬವನ್ನು ಹಂಚುತ್ತಲೇ ಇರುತ್ತದೆ.


ರಿಚ್ಮಂಡ್ ಪಾರ್ಕ್‌ನಲ್ಲಿ 'ವೈಟ್ ಲಾಡ್ಜ್' ಎಂದು ಹೆಸರಿದ್ದ ಮತ್ತೊಂದು ಚಾರಿತ್ರಿಕ ಕಟ್ಟಡವಿದೆ. ಇದನ್ನು ರಾಯಲ್ ಸ್ಕೂಲ್ ಆಫ್ ಬ್ಯಾಲೆಯಾಗಿ ಈಗ ಉಪಯೋಗಿಸುತ್ತಿದ್ದಾರೆ.

ರಿಚ್ಮಂಡ್ ಪಾರ್ಕ್‌ನಲ್ಲಿ ನಿಂತು ಲಂಡನ್ನಿನ ಪವಿತ್ರ ಚರ್ಚ್ 'ಸೇಂಟ್ ಪಾಲ್ ಕ್ಯಾಥೆಡ್ರಲ್' ಅನ್ನು ವೀಕ್ಷಿಸಲು ಸಾಧ್ಯವಿದೆ. ಈ ನೋಟವನ್ನು ನೂರಾರು ವರ್ಷಗಳಿಂದ ರಕ್ಷಿಸುತ್ತ, ಉದ್ದಕ್ಕೂ ಮರಗಿಡಗಳು ಬೆಳೆದು ಚರ್ಚನ್ನು ಮರೆಯಾಗಿಸದಂತೆ ನೋಡಿಕೊಳ್ಳಲಾಗಿದೆ. ಈ ತಡೆಯಿಲ್ಲದ ನೋಟದ ಮೊದಲನ್ನು ಸಾಂಕೇತಿಕವಾಗಿ 'ದಿ ವೇ' ಎನ್ನುವ ಜೋಡಿ ಗೇಟುಗಳ ಮೂಲಕ ಶುರು ಮಾಡಬಹುದು. 10 ಮೈಲಿ ದೂರವನ್ನು ನೋಡಲು ಟೆಲಿಸ್ಕೋಪ್‌ಗಳನ್ನು ಅಳವಡಿಸಿದ್ದಾರೆ.

ರಿಚ್ಮಂಡ್ ಪಾರ್ಕ್ ಅನ್ನು ಪೂರ್ತಿಯಾಗಿ ನಡೆದು ನೋಡಲು ಸಾಧ್ಯವಿಲ್ಲ. ಇಲ್ಲಿ ಮಿನಿ ಬಸ್ ವ್ಯವಸ್ಥೆಯಿದೆ. ಕ್ರಿಸ್‌ಮಸ್ ಸಂದರ್ಭದ ಚಳಿಯಲ್ಲಿ ಕಂಬಳಿ ಹೊದ್ದು ತಿರುಗಾಡಲು ಕುದುರೆ ಸಾರೋಟಿನ ವ್ಯವಸ್ಥೆಯಿದೆ. ಇದೊಂದು ರೀತಿಯಲ್ಲಿ ಕಳೆದುಹೋದ ಚಾರಿತ್ರಿಕ ದಿನಗಳ ಮರುಕಳಿಕೆಗಾಗಿ ಮಾಡಿರುವ ವ್ಯವಸ್ಥೆ. ನೈಸರ್ಗಿಕ ಗಾಳಿ ಸವೆಯುತ್ತ ನಡೆದಾಡಲು ಮಣ್ಣಿನ ಮಾರ್ಗಗಳಿವೆ.

ಬೇಸಿಗೆಯ ದಿನಗಳಲ್ಲಿ ಸೈಕಲ್ ಸವಾರಿಗೆ ಅನುಕೂಲವಿದೆ. ಗಾಲ್ಫ್ ಕೋರ್ಸ್, ಪವರ್ ಕೈಟಿಂಗ್ (ಗಾಳಿ ಪಟ), ರಗ್ಬಿ ಆಟ ಮತ್ತಿತರ ಆಟಗಳಾಡಲು ಅನುಕೂಲಗಳಿವೆ. ಪಕ್ಷಿ ವೀಕ್ಷಣೆಗೆ ಅನುಕೂಲಗಳಿವೆ.

ಕಾಂಕ್ರೀಟ್ ಕಟ್ಟಡಗಳು ಹೇರಳವಾಗಿರುವ ಲಂಡನ್ನಿನಲ್ಲಿ ಹೇರಳವಾದ ಹಸಿರು ಕೂಡ ಇದೆ. ಅದರ ತವರೂರು ರಿಚ್ಮಂಡ್ ಪಾರ್ಕ್ ಎಂದರೆ ತಪ್ಪಾಗುವುದಿಲ್ಲ. ಈ ಪಾರ್ಕನ್ನು ಹೊಕ್ಕು ಹೊರಬಂದರೆ, ಇದುವರೆಗೆ ಲಂಡನ್ ಎನ್ನುವ ನಗರ ಪ್ರದೇಶದಲ್ಲಿದ್ದೆವಾ ಎನ್ನುವ ಅರಿವು ಬರಲು ಕೆಲ ನಿಮಿಷಗಳಾದರೂ ಬೇಕಾಗುತ್ತದೆ. ■



ನೀಲ ಮುಗಿಲು, ಹಸಿರ ಟಿಸಿಲು, ನೀರ ಹೊನಲುಗಳೆಲ್ಲ ಒಂದು ಚೌಕಟ್ಟಿಗೊಳಪಟ್ಟಂತೆ ಕಾಣಿಸುವ ರಿಚ್ಮಂಡ್ ಪಾರ್ಕ್‌ನ ವಿಶಿಷ್ಟ ದೃಶ್ಯ